ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 06.01.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿ ಪರವಾಗಿ ಶ್ರೀ**.**ಆರ್**.**ಎಂ**.** ವಕೀಲರಿಂದಃ

ನಿಪಿ-1 ದಾಖಲೆಯಲ್ಲಿ ಪುಟ ನಂ. 4 ರಲ್ಲಿ ಕಾಣಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಕಾರ್ಯಲಯ ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರರವರಿಂದ ಸಂ.ಎಎಲ್ ಎನ್.ಎಸ್.ಆರ್.(ಶಿ) ಸಕಲ 277/2012-13 ರಂತೆ ದಿನಾಂಕ 03-12-2012 ರಲ್ಲಿ ವ್ಯವಸಾಯದ ಜಮೀನನ್ನು ವ್ಯವಸಾಯೇತ್ತರ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿಸಿರುವ ಆಕಾರವುಳ್ಳ ಪೂರ ಜಮೀನಿಗೆ ನಮೂದು ಇದೆ ಎಂದರೆ ಸಾಕ್ಷಿ ಅದು ವ್ಯವಸಾಯದ ಜಮೀನು ಆಗಿತ್ತು ಎಂದು ನುಡಿಯುತ್ತಾರೆ. ಪ್ರತಿವಾದಿ-1 ರವರು ವ್ಯವಸಾಯೇತ್ತರ ವಸತಿ ಉದ್ದೇಶಕಕಾಗಿ ಭೂಪರಿವರ್ತನೆಯಾಗಿರುವ ಆದೇಶವನ್ನು ವಜಾ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು. ಆ ರೀತಿ ಪ್ರತಿವಾದಿ-1 ಹೇಳಿದ್ದ ವಿಚಾರವು ನಿಪಿ-1 ರಲ್ಲಿ ಬರವಣಿಗೆಯಾಗಿತ್ತು ಎಂದು ನುಡಿಯುತ್ತಾರೆ. ಜಿಲ್ಲಾಧಿಕಾರಿರವರ ವತಿಯಿಂದ ಆ ರೀತಿ ವಜಾ ಆದೇಶ ಮಾಡಿಸಿಕೊಂಡಿರುವ ಬಗ್ಗೆ ಗೊತ್ತಿಲ್ಲ. ಆ ರೀತಿ ಪ್ರತಿವಾದಿ-1 ಜಿಲ್ಲಾಧಿಕಾರಿರವರ ಆದೇಶವನ್ನು ವಜಾ ಮಾಡಿಕೊಂಡು ಬರುತ್ತಾರೆ ಎಂಬ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿಲ್ಲ.

ನಿಪಿ 1 ರಲ್ಲಿ ಈಗಾಗಲೇ ಮೇಲೆ ಹೇಳಿದಂತೆ ಜಿಲ್ಲಾಧಿಕಾರಿರವರ ಆದೇಶ ಭೂಪರಿವರ್ತನೆಗಾಗಿ ವಸತಿ ಉದ್ದೇಶಕ್ಕಾಗಿ ಎಂದು ವಿಚಾರ ಇರುವಾಗ ನಾನು ಕರಾರು ಮಾಡಿಸಿಕೊಳ್ಳುವಾಗ 4 ಎಕರೆ ಜಮೀನು ಎಂದು ಬರೆಸಿಕೊಳ್ಳುವ ಬದಲಾಗಿ ವಸತಿ ಉದ್ದೇಶದ ಸೈಟುಗಳ ಒಟ್ಟು ಚದರ ಅಡಿ ವಿಸ್ತೀರ್ಣವನ್ನು ನಮೂದು ಮಾಡಿಸಿಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ನನಗೆ ಅವರು ವ್ಯವಸಾಯದ ಜಮೀನು ಎಂದು ಮಾಡಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿರವರಿಗೆ ಸೈಟುಗಳ

ಕುರಿತು ವಿಸ್ತೀರ್ಣವನ್ನು ಕಾಣಿಸಿ ಎಂದು ಕೇಳಿದ್ದೆ. ಆದರೆ ಪ್ರತಿವಾದಿ 1 ರವರು ಅಲ್ಲಿ ಸೈಟುಗಳು ಮಾರಾಟವಾಗುವುದಿಲ್ಲ ಹಾಗಾಗಿ ವ್ಯವಸಾಯದ ಜಮೀನು ಎಂದೆ ಕರಾರು ಮಾಡಿಕೊಟ್ಟರು. ಸದರಿ ವಿಚಾರವನ್ನು ನಾನು ಪ್ರತಿವಾದಿ-1 ರವರಿಗೆ ನಿಪಿ-4 ರಂತೆ ನೋಟಿಸ್ ಕೊಡುವ ಸಂದರ್ಭದಲ್ಲಿ ಬರೆಸಿರುವ ಬಗ್ಗೆ ಗೊತ್ತಿಲ್ಲ ಆದರೆ ನಮ್ಮ ವಕೀಲರಿಗೆ ನಾನು ಹೇಳಿದ್ದೆ.

ನಿಪಿ-1 ರಲ್ಲಿ ಕಾಣಿಸಿರುವಂತೆ ಕ್ರಯದ ಕರಾರಿನ ಮುಂಗಡ ಹಣವನ್ನು ನೀಡಿ ಬಾಕಿ ಹಣವನ್ನು ಜಮೀನಿನ ಹದ್ದು ಬಸ್ತು ಮಾಡಿಸಿ ಮತ್ತು ಅದರ 11 ಇ ನಕ್ಷೆಯನ್ನು ಪಡೆದ ನಂತರ ನೊಂದಣಿ ಸಮಯದಲ್ಲಿ ನೀಡುವುದಾಗಿ ಕಾಣಿಸಿದ್ದು ಆದರೆ ಆ ಜಮೀನು ಈಗಾಗಲೇ ಭೂ ಪರಿವರ್ತನೆ ಆದೇಶವಾಗಿರುವುದರಿಂದ 11 ಇ ನಕ್ಷೆ ದಾಖಲಾತಿಯ ಅಗತ್ಯ ಇಲ್ಲದಿದ್ದರೂ ಯಾಕೆ ಆ ವಿಚಾರ ಕರಾರಿನಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿ -1 ರವರು ವ್ಯವಸಾಯ ಜಮೀನು ಎಂದು ಬರೆಸಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಜಿಲ್ಲಾಧಿಕಾರಿರವರ ಭೂಪರಿವರ್ತನೆ ಆದೇಶದ ಧೃಢೀಕೃತ ಪ್ರತಿಯನ್ನು ಮತ್ತು ಅದರಂತೆ ಮತ್ತು ಸದರಿ ಸೊತ್ತಿನ ಜಮೀನುನಲ್ಲಿ ಸೈಟುಗಳ ವಿಂಗಡಣೆಯನ್ನು ಮಾಡಿರುವ ಕುರಿತು ಅನುಮೋದಿತ ನೀಲಿ ನಕಾಶೆಯನ್ನು ತೋರಿಸಲಾಗಿ ಸಾಕ್ಷಿ ಆ ರೀತಿ ಯಾವುದೇ ವಿಚಾರ ಈವರೆಗೂ ಆಗಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡ ನಾನು ಪ್ರತಿವಾದಿ-1 ರವರೊಂದಿಗೆ ಶಾಮಿಲಾಗಿ ನಿಪಿ-1 ರಂತೆ ಸುಳ್ಳು ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸೊತ್ತಿನ ಜಮೀನು ಕುರಿತು ದಿ. 13-06-2014 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಯಿಂದ ವಸತಿ ವಿನ್ಯಾಸದ

ಕುರಿತು 16187.28 ಚದರ ಮೀಟರ್ ಇರುವುದಾಗಿ ವಿನ್ಯಾಸದ ನಕ್ಷೆಗೆ ಅನುಮೋದನೆ ಸಹ ನೀಡಿ ಆದೇಶ ನೀಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಮೇಲೆ ಹೇಳಿದ ಭೂಪರಿವರ್ತನೆ ಆದೇಶದ ಪ್ರಕಾರ ಗಂಜಿಗುಂಟೆ ಗ್ರಾಮ ಪಂಚಾಯಿತಿಯಲ್ಲಿ ಸೈಟುಗಳ ಕುರಿತು ಇ-ಖಾತಾ ದಾಖಲೆಗಳು ಪ್ರತಿವಾದಿ 1 ರವರ ಹೆಸರಿನಲ್ಲಿ ಆಗಿದೆ ಎಂದರೆ ಸಾಕ್ಷಿ ಅವರು ನನಗೆ ಕ್ರಯದ ಕರಾರು ಪತ್ರವನ್ನು ಮಾಡಿ ಕೊಟ್ಟಿದ್ದರು ಕೂಡ ಆ ನಂತರ ದಬ್ಬಾಳಿಕೆಯಿಂದ ಇ-ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1 ಕರಾರು ಪತ್ರ ಆದ ದಿನಾಂಕದಂತೆ ನಿಡಿ-1 ಕರಾರು ಪತ್ರ ನನ್ನ ಮತ್ತು ಪ್ರತಿವಾದಿ 1 ರವರ ನಡುವೆ ಆಗಿತ್ತು ಸರಿ. ಆ ನಿಡಿ-1 ಕರಾರು ಪತ್ರವನ್ನು ಬಿಟ್ಟು ನಿಪಿ-1 ನ್ನು ಯಾಕೆ ಆ ದಿನ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ನಿಡಿ-1 ಕರಾರು ಪತ್ರದಲ್ಲಿ ಸರಿಯಾಗಿ ಹಣದ ಮೊತ್ತದ ಬಗ್ಗೆ ನಮೂದು ಮಾಡಿರಲಿಲ್ಲ ಮತ್ತು ಅದನ್ನು ಪ್ರತಿವಾದಿ 1 ರವರೇ ಹೊಡೆದು ಹಾಕಿ ಅಂದರೆ ಕ್ಯಾನ್ಸಲ್ ಮಾಡಿ ನಿಪಿ-1 ದಾಖಲೆಯನ್ನು ಮಾಡಿಕೊಟ್ಟರು ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿ 1 ರವರಿಗೆ ಕ್ರಯದ ಕರಾರು ಪತ್ರದ ಪ್ರಕಾರ 6,50,000/- ಹಣವನ್ನು ನೀಡಿದ್ದೇನೆ. ಆ ಪೈಕಿ 2,50,000/- ಹಣವನ್ನು ಚೆಕ್ಕಿನ ಮೂಲಕ ಉಳಿದ ಹಣವನ್ನು ನಗದಾಗಿ ಕೊಟ್ಟಿದ್ದೇನೆ. ನಾನು ಚೆಕ್ ಮೂಲಕ ಕೊಟ್ಟ ಹಣದ ಬಗ್ಗೆ ನಿಪಿ-1 ರಲ್ಲಿ ಬರವಣಿಗೆ ಇಲ್ಲ. ಆ ರೀತಿ ಚೆಕ್ ಮೂಲಕ ಕೊಟ್ಟ ಬಗ್ಗೆ ಬೇರೆ ಎಲ್ಲೂ ಷರಾವನ್ನು ಪ್ರತಿವಾದಿ-1 ಬರೆದುಕೊಟ್ಟಿಲ್ಲ. ನಿಪಿ-4 ನೋಟಿಸಿನಲ್ಲಿ ಚೆಕ್ ಮೂಲಕ ಹಾಗೂ ಉಳಿದ ಹಣವನ್ನು ನಗದಾಗಿ ಕೊಟ್ಟ ವಿಚಾರವನ್ನು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಬರೆದುಕೊಟ್ಟ ಚೆಕ್ ನಿಡಿ-2 Stop Payment ಮಾಡಿಸಿದ್ದೆ ಎಂದರೆ ಸಾಕ್ಷಿ ರಿಜಿಸ್ಟರ್ ಆದ ಮೇಲೆ

ಪ್ರತಿವಾದಿ-1 ರವರಿಗೆ ಹಣವನ್ನು ನೀಡಬೇಕು ಎಂದು ಆ ರೀತಿ ಮಾಡಿಸಿದ್ದೆ ಎಂದು ನುಡಿಯುತ್ತಾರೆ.

ನಿಪಿ-14ರ ಪ್ರಕಾರ ಕರಾರು ಪತ್ರವು ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ದಿನಾಂಕ 14-11-2009 ರಲ್ಲಿ ಮಾಡಿಕೊಟ್ಟಿರುವ ವಿಚಾರವನ್ನು ನಾನು ಪ್ರತಿವಾದಿ 1 ರವರಿಗೆ ಕೇಳಿಲ್ಲ ಕಾರಣ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ನಂತರ 2 ನೇ ಪ್ರತಿವಾದಿ ನಿಪಿ-14 ಕರಾರು ಪತ್ರದ ಕುರಿತು ಪ್ರತಿವಾದಿ 1 ರವರ ಮೇಲೆ ಓ.ಎಸ್. ನಂ. 189/2018 ರಂತೆ ದಾವೆ ಸಲ್ಲಿಸಿ ಆ ನಂತರ ಪ್ರತಿವಾದಿ 2 ರವರ ಪರ ಡಿಕ್ರಿಯಾಗಿದೆ ಎಂದರೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ನಂತರ ಪ್ರತಿವಾದಿ 2 ರವರು ಜಾರಿ ಅರ್ಜಿಯನ್ನು ನಿಪಿ-19 ರಂತೆ ಸಲ್ಲಿಸಿ ಡಿಕ್ರಿಯಂತೆ ಆದೇಶ ಕೂಡ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ 2 ರವರಿಗೆ ದಾವಾ ಸೊತ್ತಿನ ಮೇಲೆ ಮಾಲಿಕತ್ವದ ಹಕ್ಕು ಇರುವ ವಿಚಾರ ಗೊತ್ತಿದ್ದು ನಾನು ಪ್ರತಿವಾದಿ-1 ರವರೊಂದಿಗೆ ಶಾಮಿಲಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಲಾವಣ್ಯ ಎಂಬುವವರು ನನ್ನ ಮತ್ತು ಇತರರ ಮೇಲೆ ಓ.ಎಸ್. 211/2022 ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿಕೊಂಡಿದ್ದಾರೆ ಎಂದರೆ ಸರಿ. ರೇಷ್ಮಾ ಷರೀಫ್ ಮತ್ತು ಇತರರ ಓ.ಎಸ್. ನಂ. 219/2020 ರಂತೆ ಶಿಡ್ಲಘಟ್ಟ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿಕೊಂಡಿದ್ದಾರೆ ಎಂದರೆ ಸರಿ, ಆದರೆ ಆ ದಾವೆ ವಜಾವಾಗಿದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿರವರನ್ನು ಡಿಸೆಂಬರ್ 2016 ರಲ್ಲಿ ಮತ್ತು ಆ ನಂತರ ಜನವರಿ 2017 ರಲ್ಲಿ ಭೇಟಿ ಮಾಡಿದ್ದೇನೆ. ನಾನು ಪ್ರತಿವಾದಿ-1 ರವರನ್ನು ಅವರ ವಾಸವಾಗಿರುವ ಸಹಕಾರ ನಗರ್ ಬೆಂಗಳೂರಿನಲ್ಲಿ ಭೇಟಿಯಾಗಿದ್ದೆ. 2009 ರಲ್ಲಿ

ಪ್ರತಿವಾದಿ2 ರವರಿಗೆ ಮೇಲೆ ಹೇಳಿದಂತೆ ಕ್ರಯದ ಕರಾರು ಪತ್ರವಾಗಿರುವ ವಿಚಾರ ಗೊತ್ತಿದ್ದರೂ ಕೂಡ ನಾನು, ಪ್ರತಿವಾದಿ -1, ಫ್ರಾಸಾ 2 ಮತ್ತು ರಾಮಸ್ವಾಮಿ ಎಂಬುವವರು ಸೇರಿಕೊಂಡು ನಿಪಿ-1 ರಂತೆ ದಾಖಲೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸೊತ್ತು ಕೋಟಿಗಳಲ್ಲಿ ಬೆಲೆ ಬಾಳುವ ಸೊತ್ತು ಆಗಿದ್ದರೂ ಕೂಡ ಪ್ರತಿವಾದಿ-2 ರವರಿಗೆ ತೊಂದರೆ ನೀಡಲು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.